**3. ಬಾಂಬೆ ನ್ಯಾಯ ವ್ಯವಹರಣೆಗಳ (ವರದಿಗಳ ನಿಯಂತ್ರಣ) ಅಧಿನಿಯಮ, 1955 (1955ರ ಬಾಂಬೆ ಅಧಿನಿಯಮ XVIII)**

III ನೇ ಪಟ್ಟಿಯ 1 ಮತ್ತು 2ನೇ ನಮೂದುಗಳಡಿಯಲ್ಲಿ ಬರುವ ಈ ಅಧಿನಿಯಮವು ರಾಜ್ಯದ ಬೆಳಗಾಂ ಪ್ರದೇಶದಲ್ಲಿ ಜಾರಿಯಲ್ಲಿದ್ದು, ಅಶ್ಲೀಲ ಅಥವಾ ಅಸಭ್ಯವಾದ ವಿಷಯಗಳು ಮತ್ತು ಇತರ ಸಂಬಂಧಿತ ವಿಷಯಗಳನ್ನು, ಅಂಥ ವಿಷಯಗಳು ಸಾರ್ವಜನಿಕ ಹಿತಾಶಕ್ತಿಯುಳ್ಳದ್ದಾಗಿರದೇ ಇರುವುದರಿಂದ, ಅವುಗಳನ್ನು ಪ್ರಕಟಿಸುವುದನ್ನು ನಿಷೇಧಿಸುವುದಕ್ಕಾಗಿ, ನ್ಯಾಯ ವ್ಯವಹರಣೆಗಳ ವರದಿಗಳ ಪ್ರಕಟಣೆಯನ್ನು ನಿಯಂತ್ರಿಸುತ್ತದೆ. ಭಾರತೀಯ ದಂಡ ಸಂಹಿತೆಯ 354, 366, 366ಎ, 366ಬಿ, 376, 377, 497 ಮತ್ತು 498ನೇ ಪ್ರಕರಣಗಳಡಿಯಲ್ಲಿ ಅಪರಾಧಗಳಿಗೆ ಸಂಬಂಧಿಸಿದಂತೆ ನ್ಯಾಯ ನಡವಳಿಕೆಗಳನ್ನು ಪ್ರಕಟಿಸುವುದನ್ನು ಇದು ಪರಿಬಂಧಿಸುತ್ತದೆ. ಇಡೀ ರಾಜ್ಯಕ್ಕೆ ಈ ಅಧಿನಿಯಮವನ್ನು ವಿಸ್ತರಿಸಲು ಮತ್ತು ಇದನ್ನು ಭಾರತ ದಂಡ ಸಂಹಿತೆಯ 376ಎ, 376ಬಿ, 376ಸಿ, 376ಡಿ ಮತ್ತು 498ಎ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳ ಸಂಬಂಧದಲ್ಲಿನ ನಡವಳಿಕೆಗಳಿಗೆ ಇದನ್ನು ಅನ್ವಯಗೊಳಿಸಲು ಏಕಸದಸ್ಯ ಸಮಿತಿಯು ಸಲಹೆ ನೀಡಿದೆ. ಕೆಲವು ಆನುಷಂಗಿಕ ತಿದ್ದುಪಡಿಗಳಿಗೆ ಕೂಡಾ ಸಲಹೆ ನೀಡಲಾಗಿದೆ.

**4. ಹೈದರಾಬಾದ್ ಚಿನ್ನದ ಗಣಿಗಳಿಂದ ಕಳ್ಳತನವನ್ನು ನಿಷೇಧಿಸುವ 1359 ಎಫ್ ಏನಿಯಮ (1959 ಎಫ್ ರ ಹೈದರಾಬಾದ್ ಏನಿಮಯ XXIII)**

III ನೇ ಪಟ್ಟಿಯ 1 ಮತ್ತು 2 ನಮೂದುಗಳ ಅಡಿಯಲ್ಲಿ ಬರುವ ಈ ಅಧಿನಿಯಮವು ಚಿನ್ನದ ಗಣಿಗಳಿಂದ ಚಿನ್ನವನ್ನು ಕಳ್ಳತನ ಮಾಡುವುದನ್ನು ನಿಷೇಧಿಸುತ್ತದೆ. ಇದು ಈಗ ರಾಜ್ಯದ ಗುಲ್ಬರ್ಗಾ ಪ್ರದೇಶದಲ್ಲಿ ಮಾತ್ರ ಜಾರಿಯಲ್ಲಿದೆ. ಏಕ ಸದಸ್ಯ ಸಮಿತಿಯ ಸಲಹೆಯಂತೆ ಇದನ್ನು ಇಡೀ ರಾಜ್ಯಕ್ಕೆ ವ್ಯಾಪಿಸುವುದು ಮತ್ತು ಅದರಿಂದಾಗಿ ರಾಜ್ಯದಲ್ಲಿನ ಎಲ್ಲಾ ಚಿನ್ನದ ಗಣಿಗಳಿಗೆ ಅದು ಅನ್ವಯವಾಗುವುದು ಅವಶ್ಯವೆಂದು ಪರಿಗಣಿಸಲಾಗಿದೆ.